Sri VEERENDRA PATIL (Chief Minister).—

No complaint in this regard has been received by the police.

ಶ್ರೀ ಎಂ. ನಾಗಪ್ಪ.—ನನ್ನ ಪ್ರಶ್ನೆಗೆ ಉತ್ತರವಾಗಿ ಪೋಲೀಸಿನವರಿಗೆ ಯಾವ ದೂರೂ ಬಂದಿರುವುದಿಲ್ಲವೆಂದು ಹೇಳಿದ್ದೀರಿ. ಇಂತಹ ಒಂದು ವಿಷಯ ಪತ್ರಿಕೆಗಳಲ್ಲಿ ವರದಿಯಾದ ಮೇರೆ ಅದು ಕಾಗ್ನಿಜಬರ್ ಅಫೆನ್ಸ್ ಆಗುವುದರಿಂದ ಕಂಪ್ಲೇಂಟ್ ಕೊಡದಿದ್ದರೂ ಕೂಡ ಸರ್ಕಾರದವರೇ ಸ್ವತಃ ಕಾರ್ಯಕ್ರಮ ಕೈಗೊಳ್ಳಬೇಕಾದುದು ಸರ್ಕಾರದ ಧೋರಣೆಯಲ್ಲವೇ ! ಸಂಬಂಧಪಟ್ಟವರು ಕಂಪ್ಲೈಂಟ್ ಕೊಟ್ಟರೆ ಈಗಲಾದರೂ ಕೂಡ ಕ್ರಮ ಕೈಗೊಳ್ಳುತ್ತೀರಾ ?

†ಶ್ರೀ ವೀರೇಂದ್ರ ಪಾಟೀಲ್.—ಯಾವುದೋ ಒಂದು ಜಾತಿಯವರು ಆ ಜಾತಿಯ ಒಬ್ಬರನ್ನು ಜಾತಿಯಿಂದ ಹೊರಗೆ ಹಾಕಿದರೆ ಅದು ಕ್ರಿಮಿನಲ್ ಅಫೆನ್ಸ್ ಆಗುವುದಿಲ್ಲ. ಆದ್ದರಿಂದ ಆ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಎಂ. ನಾಗಪ್ಪ.—ಕಾನ್ಸ್ಟಿಟ್ಯೂಷನ್ ಪ್ರಕಾರ ಹಿಂದುಳಿದ ಪಂಗಡದವರನ್ನು ಮುಟ್ಟಿದರೆ ತಪ್ಪು ಎಂದು ಹೇಳುವವರನ್ನು ಶಿಕ್ಷೆಗೆ ಗುರಿಪಡಿಸುವುದಕ್ಕೆ ಅವಕಾಶವಿದೆ. ಆದ್ದರಿಂದ ಈ ಕೇಸಿನಲ್ಲಿಯೂ ಕೂಡ ಕಂಪ್ಲೇಂಟ್ ಕೊಟ್ಟರೆ ವಿಚಾರಣೆ ನಡೆಸುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಕಾನ್ಸ್ಟಿಟ್ಯೂಷನ್ನಿಗೆ ವಿರುದ್ಧವಾಗಿ ಕ್ರಮ ತೆಗೆದುಕೊಂಡಿದ್ದರೆ ಸಂಬಂಧಪಟ್ಟವರು ಕೋರ್ಟ್‌ಗೆ ಹೋಗುತ್ತಾರೆ. ಈ ಕೇಸ್ ಬಗ್ಗೆ ಪೋಲೀಸಿನವರು ವಿಚಾರಣೆ ಮಾಡಬೇಕಾದರೆ ಅದು ಕ್ರಿಮಿನಲ್ ಕೇಸ್ ಆಗಿರಬೇಕು. ಆದರೆ ಇದು ಕ್ರಿಮಿನಲ್ ಅಫೆನ್ಸ್ ಅಲ್ಲ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಒಂದು ಜಾತಿಯಲ್ಲಿ ತಪ್ಪು ಮಾಡಿದವರು ತಪ್ಪನ್ನು ಒಪ್ಪಿ ಕೊಳ್ಳದಿದ್ದರೆ ಅಂತಹವರನ್ನು ಜಾತಿಯಿಂದ ಹೊರಗೆ ಹಾಕುವುದರಲ್ಲಿ ತಪ್ಪೇನಿದೆ ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರೇ ಉತ್ತರ ಕೊಡುತ್ತಿದ್ದಾರೆ. ತಪ್ಪು ಮಾಡಿದವರನ್ನು ಕುಲದಿಂದ ಹೊರಗೆ ಹಾಕಿದರೆ ಅದು ಕ್ರಿಮಿನಲ್ ಅಫೆನ್ಸ್ ಆಗುವುದಿಲ್ಲ. ಈ ಬಗ್ಗೆ ಅರ್ಜಿ ಕೊಟ್ಟರೂ ಕೂಡ ವಿಚಾರಣೆ ಮಾಡುವುದಕ್ಕೆ ಬರುವುದಿಲ್ಲ.

Secretaries to Government in Mysore Government Secretariat

89. Sri M. H. JAYAPRAKASH NARAYAN (Sirsi).—

Will the Chief Minister be pleased to state :—

(*a*) the number of Secretaries working in the various departments of the State Government Secretariat ;

(*b*) since how long the said Secretaries are working in the respective posts (detailed information may please be furnished) ;

(*c*) whether there are any suitable persons belonging to Scheduled Castes and Scheduled Tribes that are capable of serving in the said Secretaries' posts ; the reasons for not giving representations in the Secretariat ?

Sri VEERENDRA PATIL (Chief Minister).—

(*a*) 13.

(*b*) *Vide* statement appended.

(*c*) None. The posts of Secretaries are filled up by selection and not merely on seniority. There is no provision to fill up these posts communitywise.

(SRI VEERENDRA PATIL)

STATEMENT

Showing the particulars of the officers holding the posts of Secretaries to Government.

Sl. No.	Name and Designation	Department	Date of appointment to the present post	Period
1	2	3	4	5
	Sriyuths :—			
1.	G. V. K. Rao, I.A.S., Development Commissioner, Special Secretary for Agricultural Production and Development; and Secretary to Government, Planning Department ...		26-7-1966	4 years.
2.	N. Lakshmana Rau, I. A. S., Seceretary to Government.	Home Department ...	14-7-1966	4 years.
3.	Mani Narayanaswamy, I.A.S., Secretary to Government.	Finance Department ...	24-2-1969	1½ years.
4.	S. Varadan, I. A. S., Secretary to Government.	Public Works and Electricity Department.	27-5-1970	2 months.
5	M. K. Venkateshan, I. A. S., Secretary to Government.	Food, Civil Supplies and Labour Department.	7-6-1969	1 year.

6.	**M. S. Swaminathan, I. A. S., Commissioner for Land Reforms and *Ex-Officio* Secretary to Government.**	**Revenue Department ...**	**1-4-1968**	**2 years.**
7.	B. S. Muddappa, I. A. S., Secretary to Government.	Health and Municipal Administration Department.	2-6-1969	1 year.
8.	R. A. Naik, I. A. S., Secretary to Government.	Agriculture and Forest Department.	22-5-1970	2 months.
9.	Chandappa Patel, I. A. S., Secretary to Government.	Commerce and Industries Department.	28-7-1969	1 year.
10.	N. Narasimha Rau, I. A. S., Secretary to Government.	Development, Housing, Panchayatiraj and Co-operation Department.	27-5-1969	1 year.
11.	K. R. Ramachandran, I.A.S., Secretary to Government.	Education and Youth Services Department.	15-12-1969 (A.N.)	7 months.
12.	M. H. Parthasarathy, I. A. S., Secretary to Government	Social Welfare Department ...	3-8-1970 (A.N.)	...
13.	C. Govindaraju, Secretary to Government	Department of Law and Parliamentary Affairs.	24-1-1970	6 months.

ಶ್ರೀ ಎಂ. ಎಚ್. ಜಯಪ್ರಕಾಶನಾರಾಯಣ್.—ನಾನು ಪ್ರಶ್ನೆ ಕೇಳಿದ ಉದ್ದೇಶ ಕಾರ್ಯದರ್ಶಿಗಳ ಹುದ್ದೆಯಲ್ಲಿ ಬ್ರಾಹ್ಮಣರು ಎಷ್ಟು ಜನರಿದ್ದಾರೆ, ಲಿಂಗಾಯಿತರು ಎಷ್ಟು ಜನರಿದ್ದಾರೆ, ಒಕ್ಕಲಿಗರು ಎಷ್ಟು ಜನರಿದ್ದಾರೆ, ಹರಿಜನರು ಎಷ್ಟು ಜನರಿದ್ದಾರೆ ಎಂಬುದನ್ನು ತಿಳಿದುಕೊಳ್ಳುವುದಕ್ಕಾಗಿ ಅಲ್ಲ. ನೀವು ಕೊಟ್ಟಿರುವ ಪಟ್ಟಿಯಲ್ಲಿ ಚೀಫ್-ಸೆಕ್ರೆಟರಿಯವರ ಹೆಸರನ್ನು ಸೇರಿಸಿಲ್ಲ. ಅವರು ಸೆಕ್ರೆಟರಿಯವರ ಲಿಸ್ಟಿಗೆ ಸೇರುವುದಿಲ್ಲವೇ ! ಎಲ್ಲ ಕಡೆಯಲ್ಲಿಯೂ ಕೂಡ ಹಿಂದುಳಿದ ವರ್ಗದವರಿಗೆ ಪ್ರಾತಿನಿಧ್ಯ ಕೊಡುತ್ತಿರುವಾಗ ಸೆಕ್ರೆಟರಿಯವರ ದರ್ಜೆಯಲ್ಲಿ ಪ್ರಾತಿನಿಧ್ಯ ಕೊಡದಿರುವುದಕ್ಕೆ ಕಾರಣವೇನು ? ಹಿಂದುಳಿದ ವರ್ಗದವರಲ್ಲಿ ಅರ್ಹರಾದವರು, ದಕ್ಷತೆಯುಳ್ಳವರು ಇದ್ದರೆ ಅಂತಹವರಿಗೆ ಪ್ರಾತಿನಿಧ್ಯ ಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

†ಶ್ರೀ ವೀರೇಂದ್ರ ಪಾಟೀಲ್.—ಮುಖ್ಯ ಕಾರ್ಯದರ್ಶಿಯವರ ಬಗ್ಗೆ ಪ್ರಶ್ನೆ ಕೇಳಿರಲಿಲ್ಲವಾದ್ದರಿಂದ ಅವರ ಹೆಸರನ್ನು ಇದರಲ್ಲಿ ಸೇರಿಸಿಲ್ಲ. ಈ ಪೋಸ್ಟಿಗೆ ನೇಮಕ ಮಾಡುವಾಗ ಸೀನಿಯರ್ ಆಫೀಸರ್ಸ್ ಯಾರು ಇರುತ್ತಾರೋ ಅಂತಹವರನ್ನು ನೇಮಕ ಮಾಡಬೇಕಾಗುತ್ತದೆ. ಸರ್ಕಾರಕ್ಕೆ ಒಳ್ಳೆಯ ಅಡ್ವೈಸ್ ಕೊಡುವವರನ್ನು ನೋಡಿ ನೇಮಕ ಮಾಡಬೇಕಾಗುತ್ತದೆ. ದುರ್ದೈವದಿಂದ ಏನಾಗಿದೆ ಎಂದರೆ, ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ ಟ್ರೈಬ್ಸ್‌ನಲ್ಲಿ ಸೀನಿಯರ್ ಆಫೀಸರ್ಸ್ ಬಹಳ ಜನ ಉಳಿದಿಲ್ಲ. ಒಬ್ಬರು ಇದ್ದರು, ಅವರು ಈಗ ಜಾಯಿಂಟ್ ಸೆಕ್ರೆಟರಿ ಪೋಸ್ಟ್‌ನಲ್ಲಿ ಇದ್ದಾರೆ. ಮೊನ್ನೆತಾನೆ ಐ. ಎ. ಎಸ್. ಮಾಡಿಕೊಂಡಿರುವವರು ಈಗ ಜಿಲ್ಲಾಧಿಕಾರಿಗಳಾಗಿದ್ದಾರೆ. ಅವರಿಗೆ 2—3 ವರ್ಷ ಸರ್ವಿಸ್ ಆಗಿದೆ. ಅಂತಹವರನ್ನು ಸಚಿವಾಲಯದಲ್ಲಿ ಸೆಕ್ರೆಟರಿಗಳನ್ನಾಗಿ ನೇಮಕ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಸ್. ಎಸ್. ಅರಕೇರಿ.—ಉತ್ತರದಲ್ಲಿ ಸೀನಿಯಾರಿಟಿಯೊಂದನ್ನೇ ಆಧಾರವನ್ನಾಗಿಟ್ಟುಕೊಂಡಿರುವುದಿಲ್ಲ ಮತ್ತು ಕೋಮುವಾರಾಗಿ ಭರ್ತಿ ಮಾಡುವುದಿಲ್ಲವೆಂದು ಹೇಳಿದ್ದೀರಿ. ರಾಜ್ಯಾಂಗದಲ್ಲಿ ಹಿಂದುಳಿದವರಿಗೆ ಪ್ರತ್ಯೇಕವಾಗಿ ರಕ್ಷಣೆ ಇರುವುದರಿಂದ ಈ ಹುದ್ದೆಗಳನ್ನು ಹಿಂದುಳಿದವರಿಗೆ ಕೊಡುವುದರಲ್ಲಿ ಏನು ಅಭ್ಯಂತರವಿದೆ ? ಹಿಂದುಳಿದ ವರ್ಗದವರಲ್ಲಿ ಕೆಲವರು ಸೀನಿಯರ್—ಮೋಸ್ಟ್ ಆಫೀಸರ್ಸ್ ಇದ್ದರೂ ಕೂಡ ಅವರಿಗೆ ಕಾರ್ಯದರ್ಶಿಯವರ ಹುದ್ದೆಯನ್ನು ಕೊಡದಿರುವುದರಿಂದ ಮೈಸೂರು ಸರ್ಕಾರ ಹರಿಜನರಿಗೆ ಅನ್ಯಾಯ ಮಾಡಿದಂತಾಗುವುದಿಲ್ಲವೇ !

ಶ್ರೀ ವೀರೇಂದ್ರ ಪಾಟೀರ್.—ನಾನು ಮೊದಲು ಹೇಳಿದ್ದು ಮಾನ್ಯ ಸದಸ್ಯರಿಗೆ ಅರ್ಥವಾಯಿತೋ ಇಲ್ಲವೋ ಗೊತ್ತಿಲ್ಲ. ಸೀನಿಯರ್ ಆಫೀಸರ್ಸ್ ಲಿಸ್ಟ್‌ನಲ್ಲಿ ಹರಿಜನರು ಹೆಚ್ಚು ಜನ ಉಳಿದಿಲ್ಲ ಇದ್ದವರಲ್ಲಿ ಬಹಳ ಜನ ಹೋಗಿದ್ದಾರೆ. ಈಗಿರುವವರಲ್ಲಿ ಯುವಕರು ಇದ್ದಾರೆ. ಅವರಿಗೆ ಸಾಕಷ್ಟು ಅನುಭವವಿಲ್ಲ. ಈ ಹುದ್ದೆಗಳನ್ನು ಬ್ರಾಹ್ಮಣರು, ಲಿಂಗಾಯಿತರು, ಒಕ್ಕಲಿಗರು ಎಂದು ಜಾತಿ ಆಧಾರದ ಮೇರೆಗಾಗಲೀ ಅಥವಾ ಹಳೆಯ ಮೈಸೂರು, ಹೊಸ ಮೈಸೂರು ಎಂಬ ಆಧಾರದ ಮೇರೆಗಾಗಲೀ ನೇಮಕ ಮಾಡುವುದಕ್ಕೆ ಬರುವುದಿಲ್ಲ. ಈ ಹುದ್ದೆಗೆ ನೇಮಕವಾಗುವವರು ಸೀನಿಯರ್ ಮೋಸ್ಟ್ ಆಫೀಸರ್ಸ್ ಆಗಿರಬೇಕಾಗುತ್ತದೆ. ಮತ್ತು ಆ ಹುದ್ದೆಯಲ್ಲದ್ದುಕೊಂಡು ಸರ್ಕಾರಕ್ಕೆ ಮೇಲಿಂದ ಮೇಲೆ ಅಡ್ವೈಸ್ ಮಾಡಬೇಕಾಗುತ್ತದೆ. ಆದ್ದರಿಂದ ಯೋಗ್ಯತೆ ನೋಡಿಕೊಂಡು ನೇಮಕ ಮಾಡಬೇಕಾಗುತ್ತದೆ.

ಶ್ರೀ ಎನ್. ಹುಚ್ಚಮಾಸ್ತಿಗಾಡ.—ಈ ಹುದ್ದೆಗಳನ್ನು ಭರ್ತಿ ಮಾಡಲು ಸೀನಿಯಾರಿಟಿ ಒಂದೇ ಆಧಾರವಲ್ಲ ಮತ್ತು ಜಾತಿಯು ಆಧಾರದ ಮೇಲೆ ಭರ್ತಿ ಮಾಡುವುದಿಲ್ಲ ಎಂದು ಹೇಳಿದಿರಿ. ಇವೆರಡನ್ನು ಬಿಟ್ಟು ಇನ್ನು ಯಾವ ಆಧಾರದ ಮೇಲೆ ಭರ್ತಿ ಮಾಡುತ್ತೀರಿ ?

ಶ್ರೀ ವೀರೇಂದ್ರ ಪಾಟೀರ್.—ಈ ಹುದ್ದೆಗಳನ್ನು ಭರ್ತಿ ಮಾಡುವಾಗ ಸೀನಿಯಾರಿಟಿ ಮತ್ತು ಜಾತಿಯನ್ನು ನೋಡುವ ಹಾಗೇ ಇಲ್ಲ. ಸೀನಿಯರ್-ಮೋಸ್ಟ್ ಆಫೀಸರ್ಸ್, ಆಗಿರಬೇಕು, ಎಕ್ಸ್‌ಪೀರಿಯನ್ಸ್ ಇರಬೇಕು ಮತ್ತು ಸೆಕ್ರೆಟರಿ ಕೆಲಸ ಮಾಡುವಂತಹ ಯೋಗ್ಯತೆ ಮತ್ತು ಅರ್ಹತೆ ಇರಬೇಕು. ಇದನ್ನೆಲ್ಲಾ ನೋಡಿಕೊಂಡು ಆರಿಸುತ್ತೇವೆ. ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ಈ ಹುದ್ದೆಗಳನ್ನು ಏತಕ್ಕೆ ಕೊಟ್ಟಿಲ್ಲವೆಂದರೆ ಸೀನಿಯರ್-ಮೋಸ್ಟ್ ಆಫೀಸರ್ಸ್ ಲಿಸ್ಟ್‌ನಲ್ಲಿ ಇವರು ಬಹಳ ಕಡಿಮೆ ಸಂಖ್ಯೆಯಲ್ಲಿ ಇದ್ದಾರೆ.

Sri K. PRABHAKAR.—Since how long Sri H. R. Thippaiah is in the rank of the Deputy Commissioner ?

Sri VEERENDRA PATIL.—I do not think I have got the list of I. A. S. Officers. His name does not find a place in the list.

ಶ್ರೀ ಎಂ. ಹೆಚ್. ಜಯಪ್ರಕಾಶನಾರಾಯಣ್.—ಒಬ್ಬರೇ ಒಬ್ಬರುಇದ್ದಾರೆ ಎನ್ನುವುದನ್ನು ಮಾನ್ಯ ಮುಖ್ಯ ಮಂತ್ರಿಗಳು ಒಪ್ಪಿಕೊಂಡಿದ್ದಾರೆ. ಇವರನ್ನಾದರೂ ಸೆಕ್ರಟರಿ ದರ್ಜೆಗೆ ಏರಿಸಲು ಪ್ರಯತ್ನ ಮಾಡುತ್ತಾರೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಒಬ್ಬರು ಜಾಯಿಂಟು ಸೆಕ್ರಟರಿಗಳಾಗಿ ಈಗ ಕೆಲಸ ಮಾಡುತ್ತಿದ್ದಾರೆ. ಅವರನ್ನು ಕಳೆಗೆ ಮೇಲೆ ಮಾಡಿ ತಕ್ಷಣ ನೇಮಕ ಮಾಡಲು ಆಗುವುದಿಲ್ಲ. ಇಂತಹ ವಿಷಯಗಳಲ್ಲಿ ಪರಿಸ್ಥಿತಿಯನ್ನು ಅನುಸರಿಸಿ, ಅಧಿಕಾರಿಗಳ ಅನುಭವ ಇತ್ಯಾದಿಗಳನ್ನೆಲ್ಲಾ ನೋಡಿಕೊಂಡು ನೇಮಕಗಳನ್ನು ಮಾಡಬೇಕಾಗುತ್ತದೆ. ಇವೆಲ್ಲವನೂ ವಿಚಾರ ಮಾಡಿ ತಕ್ಕ ನಿರ್ಣಯಗಳನ್ನು ತೆಗೆದುಕೊಳ್ಳಬೇಕಾಗುತ್ತದೆ ಎಂದು ಆಗಲೇ ಹೇಳಿದ್ದೇನೆ.

ಅಧ್ಯಕ್ಷರು.—ಈಗ ಪ್ರಶ್ನೋತ್ತರಗಳ ವೇಳೆಯಾಯಿತು.

Adjournment Motion : *Re* : The Mysore Delegation to Japan to vis it Expo—'70.

Leave to Move

Sri H. SIDDAVEERAPPA (Harihara).—I beg leave of the House to move an Adjournment Motion that stands in my name regarding the EXPO Trip sponsored by the Government of Mysore.

Mr. SPEAKER.—The hon. Member Sri Siddaveerappa has given a notice of an Adjournment motion. Similar notices have been given by a number of hon. Members. I shall read out their names. Thay are :

Sriyuths :

1 H. Siddaveerappa
2 M. Mallikarjuna Swamy
3 T. R. Shamanna
4 Vatal Nagaraj
5 A. R. Badri Narayan
6 M. S. Krishnan
7 M. Nagappa
8 D. B. Kalmankar
9 B. B. Sayanak
10 N. A. Channe Gowda
11 B. P. Gangadhar
12 P. V. Aithala
13 D. S. Nadakarni
14 S. Bangarappa
15 H. N. Nanje Gowda
16 B. Bhaskar Shetty
17 C. M. S. Sastry

In view of the peculiar situation has arisen regarding the EXPO-'70 Delegation and the amount of interest it has created throughout the State, I consider it necessary to give my consent to the adjournment motion of one hon. Member. I have adopted the method of considering the notices of motions in order of times they have been received by me. So I have given consent to the motion of Sri H. Siddaveerappa as it is the first I have received in point of time.